# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತಿಪಟೂರು.

## ಎಸ್.ಸಿ ಸಂಖ್ಯೆ: 10011/2020

KATK900001972020

## ಮತ್ತು

## ಎಸ್.ಸಿ ಸಂಖ್ಯೆ: 10052/2024

KATK900008032024

**ಪ್ರಮಾಣೀಕರಿಸಿದ ದಿನಾಂಕ: 10.12.2025.**

**ಚಾಸಾ.1**

**ಫಾಸಾ.1**

| | |
|---|---|
| ಹೆಸರು | ದಿನೇಶ್ |
| ತಂದೆಯ ಹೆಸರು | ಚಿಕ್ಕೇಗೌಡ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ದಾಸೇನಹಳ್ಳಿ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಮತ್ತು ಯೋಗೇಶ್ ಮತ್ತು ಚಾಸಾ-3 ರಿಂದ 5 ಸ್ನೇಹಿತರು ಇರುತ್ತೇವೆ. ನಾವು ಗಂಡಸಿಯಿಂದ ಸಿಂದನೂರಿಗೆ ಮೇಕೆ ಮರಿಗಳನ್ನು ತರಲು ಬುಲೇರೋ ವಾಹನದಲ್ಲಿ ಹೋಗುತ್ತಿದ್ದೆವು. ನಾನು ಹಾಗೂ ಯೋಗೇಶ್, ಶೇಕರ್, ಮಹಲಿಂಗಪ್ಪ, ಉಮೇಶ್ ಹಾಗೂ ಮತ್ತೊಬ್ಬರು ಹೋಗುತ್ತಿದ್ದೆವು. ದಿಃ 24.03.2019 ರಂದು ರಾತ್ರಿ 8.00 ಗಂಟೆಗೆ ಗಂಡಸಿಯಿಂದ ಹೊರಟಿರುತ್ತೇವೆ. ನಾವು ಹುಳಿಯಾರು ಮಾರ್ಗವಾಗಿ ಸೀಗೇಬಾಗೇ ಹಳ್ಳಿಯ ಹತ್ತಿರ ಬಂದಾಗ 11.15 ಗಂಟೆಗೆಯಾಗಿರುತ್ತದೆ. ಆಗ ಅವರು ನಾವು ಚಲಿಸುತ್ತಿದ್ದ ವಾಹನಕ್ಕೆ ಕೋಳಿ ಮೊಟ್ಟೆಯನ್ನು ಹೊಡೆದಿರುತ್ತಾರೆ. ನಂತರ ನಾವು ವಾಹನವನ್ನು ನಿಲ್ಲಿಸಿದಾಗ ಆರು ಜನ ಆಸಾಮಿಗಳು ಕಾರಿನಲ್ಲಿ ಬಂದಿರುತ್ತಾರೆ ಹಾಗೂ ನಾಲ್ಕು ಜನ ನಮ್ಮ ಬೊಲೇರೋ ವಾಹನದ ಹಿಂದೆ ಹತ್ತಿರುತ್ತಾರೆ ಹಾಗುಾ ಇಬ್ಬರು ಮುಂದೆ ಇರುತ್ತಾರೆ. ನಾವು ಹಿಂದಿನ ಸೀಟಿನಲ್ಲಿ ನಾನು ಮಹಾಲಿಂಗಪ್ಪ, ಯೋಗೇಶ್ ಮತ್ತು ಶೇಕರ್ ಮಲಗಿದ್ದೆವು. ಆಗ ನಮ್ಮ ಕಣ್ಣಿಗೆ ಖಾರದ ಪುಡಿಯನ್ನು ಎರಚಿ ನಮ್ಮ ಬಳಿ ದುಡ್ಡನ್ನು ಕೇಳಿರುತ್ತಾರೆ. ನಂತರ ಅವರು ನನ್ನ ಎಡ ತೋಳಿಗೆ ಹಾಗೂ ಬಲ ಕಾಲಿಗೆ ಚಾಕುವಿನಿಂದ ಚುಚ್ಚಿರುತ್ತಾರೆ. ನನ್ನ ಬಳಿ 50,000/- ಸಾವಿರ ನಗದು ಹಣ ಹಾಗೂ ಮೊಬೈಲ್ ಇದ್ದು, ಅವುಗಳನ್ನು ಕಿತ್ತುಕೊಂಡಿರುತ್ತಾರೆ. ನಮ್ಮ ವಾಹನದ ಹಿಂದೆ ಅಂದು ಟವೆರಾ ಕಾರ್ ಬರುತ್ತಿದ್ದು ಅದರ ಬೆಳಕನ್ನು ನೋಡಿ ಸದರಿ ಆಸಾಮಿಗಳು ಬಿಟ್ಟು ಓಡಿ ಹೋಗಿರುತ್ತಾರೆ. ನಂತರ ಸದರಿ ಆಸಾಮಿಗಳು ಅವರು ತಂದಿದ್ದ ಕಾರಿನಲ್ಲಿ ಹೊರಟು ಹೋಗಿರುತ್ತಾರೆ. ನನ್ನ ಕಣ್ಣಿಗೆ ಖಾರದ ಪುಡಿ ಬಿದ್ದು ಕಣ್ಣು ಕಾಣದ ಹಾಗೇ ಆಗಿದ್ದು

ನನ್ನನ್ನು ಅರಸೀಕೆರೆ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿರುತ್ತಾರೆ. ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಮ್ಮ ವಾಹನದ ಚಾಲಕನ ಮೇಲೆ ಗುಮಾನಿ ಇದೆ ಎಂದು ತಿಳಿಸಿದ್ದು ನಂತರ ಪೋಲಿಸರು ಆತನನ್ನು ವಿಚಾರಣೆ ಮಾಡಿದಾಗ ಆತನು ತಾನು ಆರೋಪಿತರನ್ನು ಕರೆಸಿ ದರೋಡೆ ಮಾಡಿಸಿರುವುದಾಗಿ ಒಪ್ಪಿಕೊಂಡಿರುತ್ತಾನೆ.

ದಿಃ 26.03.2019 ರಂದು ದೂರನ್ನು ಮಧ್ಯಾಹ್ನ 12.00 ಗಂಟೆಗೆ ನೀಡಿರುತ್ತೇನೆ. ನಾನು ಒಂದು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ದೂರನ್ನು ತಡವಾಗಿ ನೀಡಿರುತ್ತೇನೆ. ನಾನು ನೀಡಿರುವ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು **ನಿ.ಪಿ–1** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–1(ಎ) ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ದೂರನ್ನು ನೀಡಿದ ನಂತರ ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ನಾನು ಸದರಿ ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಖಾರದ ಪುಡಿ ಬಿದ್ದಿರುವುದು ಕಂಡು ಬಂದಿರುತ್ತದೆ. ಸದರಿ ಸ್ಥಳದಲ್ಲಿ ಪೋಲಿಸರು ಮಹಜರ್ ಅನ್ನು ಜರುಗಿಸಿದ್ದು, ಸ್ಥಳದಲ್ಲಿ ಬಿದ್ದಿದ್ದ ಖಾರದ ಪುಡಿಯನ್ನು ಶೇಕರಿಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಮೊಟ್ಟೆ ಬಿದ್ದಿದ್ದು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರ್ ಅಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು **ನಿ.ಪಿ–2** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–

2(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪೋಲಿಸರು ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು **ನಿ.ಪಿ–3 ಮತ್ತು ನಿ.ಪಿ–4** ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

1. ಮಣ್ಣು ಮಿಶ್ರಿತ ಖಾರದ ಪುಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ಮುದ್ದೆಮಾಲು–1** ಎಂದು ಗುರುತಿಸಲಾಯಿತು.

ಸದರಿ ಪೋಲಿಸರಿಗೆ ನಾನು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಉಮೇಶ್ ಹಾಗೂ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ಪೊಲೀಸ್ ಠಾಣೆಯಲ್ಲಿ ದಿಃ 26.03.2019 ರಂದು ನೋಡಿರುತ್ತೇನೆ ಹಾಗೂ ಎರಡು ದಿನದ ನಂತರ ಎಲ್ಲಾ ಆರೋಪಿತರನ್ನು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿಃ 07.04.2019 ರಂದು ತುಮಕೂರು ಕಾರಗೃಹದಲ್ಲಿ ಉಮೇಶ್ ಹಾಗೂ ಎಲ್ಲಾ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಆರೋಪಿತರನ್ನು ಇತರ 15 ಆರೋಪಿತರೊಂದಿಗೆ ನಿಲ್ಲಿಸಿ ಸದರಿ ಪ್ರಕರಣದ ಆರೋಪಿತರನ್ನು ಗುರುತಿಸಿರುತ್ತೇನೆ. ಸದರಿ ಆರೋಪಿತರನ್ನು ಗುರುತಿಸಲು ತಹಶೀಲ್ದಾರರವರು ತಿಳಿಸಿರುತ್ತಾರೆ. ಸದರಿ ಆರೋಪಿತರನ್ನು ಗುರುತಿಸಿದ ನಂತರ ಅಲ್ಲಿ ದಾಖಲಾತಿಯನ್ನು ಮಾಡಿಕೊಂಡಿದ್ದು, ಅದಕ್ಕೆ ಸಹಿ ಮಾಡಿರುತ್ತೇನೆ. ಸದರಿ ಆರೋಪಿತರನ್ನು ಗುರುತಿಸಿದ ಬಗ್ಗೆ ದಾಖಲಾತಿಗೆ

ಸಹಿ ಮಾಡಿರುತ್ತೇನೆ. ಸದರಿ ದಾಖಲಾತಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು **ನಿ.ಪಿ–5** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು **ನಿ.ಪಿ–6** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–6(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಉಮೇಶ್ ಈತನನ್ನು ಮಾತ್ರ ಸಾಕ್ಷಿಯು ಹೆಸರಿನ ಮೇಲೆ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ಪ್ರತ್ಯೇಕವಾಗಿ ಹೆಸರಿನ ಮೇಲೆ ಗುರುತಿಸಿರುವುದಿಲ್ಲ. ಸದರಿ ಆರೋಪಿತರನ್ನು ನಾನು ನೋಡಿರುತ್ತೇನೆ. ಹುಳಿಯಾರು ಪೋಲಿಸ್ ಠಾಣೆಯಲ್ಲಿ ಹಾಗೂ ತುಮಕೂರು ಕಾರಗೃಹದಲ್ಲಿ ಗುರುತಿಸಿರುತ್ತೇನೆ.

ಸದರಿ ನ್ಯಾಯಾಲಯದಿಂದ ನಾನು 30,000/– ಹಣವನ್ನು ಬಿಡಿಸಿಕೊಂಡಿರುತ್ತೇನೆ. ಸದರಿ ಹಣವನ್ನು ನಾವು ಚಿಕ್ಕನಾಯಕನಹಳ್ಳಿ ಪೋಲಿಸ್ ಠಾಣೆಯಲ್ಲಿ ಬಿಡಿಸಿಕೊಂಡಿರುತ್ತೇನೆ. ಹಣವನ್ನು ಪಡೆಯುವ ಕಾಲಕ್ಕೆ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ನಾನು ಬಿಡಿಸಿಕೊಂಡ 30,000/– ಹಣ 500/– ಮುಖ ಬೆಲೆಯ ನೋಟುಗಳು ಇರುತ್ತವೆ. ಸದರಿ ಹಣವನ್ನು ಬಿಡುಗಡೆ ಮಾಡುವ ಕಾಲಕ್ಕೆ ತೆಗೆದಿರುವ ಪೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು **ನಿ.ಪಿ–7** ಎಂದು ಗುರುತಿಸಲಾಯಿತು. ನಾವು ಅಂದು ಪ್ರಯಾಣಿಸುತ್ತಿದ್ದ ಬೋಲೇರೋ ವಾಹನವನ್ನು

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಬೋಲೇರೋ ವಾಹನದ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಬೋಲೆರೋ ವಾಹನದ ಪೋಟೋವನ್ನು **ನಿ.ಪಿ-8** ಎಂದು ಗುರುತಿಸಲಾಯಿತು. ಸದರಿ ಆರೋಪಿತರು ಬಂದಿದ್ದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**(ಸದರಿ ವಾಹನದ ಪೋಟೋವನ್ನು ಹಾಜರು ಪಡಿಸಿಲ್ಲದ ಕಾರಣ ಸದರಿ ವಾಹನವನ್ನು ಗುರುತಿಸಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಕಾಲವಕಾಶ ನೀಡಿದ್ದು, ಮಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**